# ಆಹಾ ಸುದ್ದಿ!

★ ಸಸಿತೋಟ



ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿರುವ ಇಡೀ ಅಪಾರ್ಟ್‌ಮೆಂಟ್ ಒಂದನ್ನು ತಲೆ ಕೆಳಗಾಗಿ ವಿನ್ಯಾಸ ಮಾಡಲಾಗಿದೆ. ಮೂರು ಕೊಠಡಿಗಳು, ಎರಡು ಸ್ನಾನದ ಮನೆಗಳನ್ನು ಈ ರೀತಿ ವಿನ್ಯಾಸ ಮಾಡಲಾಗಿದ್ದು, ಅಲ್ಲಿ ಉಳಿದುಕೊಳ್ಳಲಂತೂ ಸಾಧ್ಯವಿಲ್ಲ. ವೃಥಾ ನಷ್ಟ. ಆದರೆ ಮನೆ ಮಾಲೀಕ 10 ಡಾಲರ್‌ನಂತೆ ಟಿಕೆಟ್ ಇಟ್ಟು ನಷ್ಟ ತುಂಬಿಕೊಳ್ಳುತ್ತಿದ್ದಾನಂತೆ.

ಫ್ಲಾರಿಡಾದ ಮನೆಯೊಂದರಲ್ಲಿ ಮಂಚದಿಂದ ಕೆಳಗೆ ಬಿದ್ದ ದಢೂತಿ ವ್ಯಕ್ತಿಯನ್ನು ಮನೆಯಿಂದ ಹೊರ ತರಲು ಇಡೀ ಮನೆಯ ಗೋಡೆಯನ್ನೇ ಕತ್ತರಿಸಬೇಕಾಯಿತಂತೆ. ಕತ್ತರಿಸುವ ಶ್ರಮದ ಜೊತೆ ದಢೂತಿಯಿಂದ ಬೈಗುಳದ ಮಳೆ. ಅಲ್ಲಿ ಅಗ್ನಿಶಾಮಕ ದಳದಲ್ಲಿ 'ದಢೂತಿ ತಂಡ' ಒಂದನ್ನು ರೂಪಿಸಲಾಗಿದ್ದು, ಒಂದು ಸಾವಿರ ಪೌಂಡ್ (453 ಕೆಜಿ) ತೂಕದವರೆಗಿನ ವ್ಯಕ್ತಿಗಳ ರಕ್ಷಣೆ ಮಾಡುತ್ತದೆಯಂತೆ. ತಿಂಗಳಿಗೆ ಒಂದೆರಡು ಪ್ರಕರಣಗಳು ಮಾಮೂಲು ಎಂದಿದೆ ತಂಡ.



ಸೈಬೀರಿಯಾದಲ್ಲಿ ವಾರ್ಷಿಕ ಸೌಂದರ್ಯ ಮೇಳ ನಡೆಯುತ್ತದೆ. ಕ್ಷೌರಿಕರ ಸ್ಪರ್ಧೆಯಲ್ಲಿ ಕೇಶ ವಿನ್ಯಾಸಕ ಕೊಡಲಿಯಿಂದ ಕೇಶ ವಿನ್ಯಾಸ ಮಾಡಿ ಮೆಚ್ಚುಗೆ ಗಳಿಸಿದನೋ, ಭಯ ಹುಟ್ಟಿಸಿದನೋ ಗೊತ್ತಾಗಲಿಲ್ಲ.

ಯೂರೋಪ್ ಮತ್ತು ಅಮೆರಿಕಾದಲ್ಲಿ ಎರಡು ಶಬ್ದಗಳನ್ನು ಜೋಡಿಸಿ ಒಂದು ಹೊಸ ಶಬ್ದವನ್ನೇ ಸೃಷ್ಟಿಸುವ ಪರಿಪಾಠ ಜಾಸ್ತಿಯಾಗಿದೆ. ಅದರಲ್ಲೂ ಪ್ರವಾಸೋದ್ಯಮ ಸಂಸ್ಥೆಗಳು ಈ ನಿಟ್ಟಿನಲ್ಲಿ ಮುಂದಿವೆಯಂತೆ. ಗ್ಲಾಮರ್ ಮತ್ತು ಕ್ಯಾಂಪಿಂಗ್ ಸೇರಿಸಿ ಗ್ಲಾಂಪಿಂಗ್, ಸ್ಟೇ ಮತ್ತು ವೆಕೇಶನ್ ಸೇರಿಸಿ ಸ್ಟೇಕೇಶನ್, ಬ್ಯುಸಿನೆಸ್ ಮತ್ತು ಲಿಸರ್ ಸೇರಿಸಿ ಬ್ಲಿಸರ್, ಹನಿಮೂನ್ ಮತ್ತು ವಾಲಂಟೀಯರಿಂಗ್ ಸೇರಿಸಿ ಹನಿಟೀಯರಿಂಗ್... ಹೀಗೆ. ಒಟ್ಟಿನಲ್ಲಿ ಮನಿ ಮತ್ತು ಸ್ಪೆಂಡಿಂಗ್ ಸೇರಿಸಿ ಮನಿಡಿಂಗ್..!

ಈ ನೆಕ್‌ಲೇಸ್‌ನ ಪದಕದಲ್ಲಿ ಸತ್ತ ವ್ಯಕ್ತಿಯ ಬೆರಳಚ್ಚಿನ ಗುರುತಿದೆ. ವಿಯೆನ್ನಾದ ಮುನ್ಸಿಪಲ್ ಶವ ಸಂಸ್ಕಾರ ಸೇವಾ ಸಂಸ್ಥೆ ಸತ್ತ ವ್ಯಕ್ತಿಯ ಸಂಸ್ಕಾರದ ನಂತರ ಇದನ್ನು ರೂಪಿಸಿ ಕುಟುಂಬದವರಿಗೆ ನೀಡಿದೆ. ಈ ಸಂಸ್ಥೆ 1903ರಿಂದ ಇದುವರೆಗೆ 19 ಸಾವಿರ ಶವಗಳನ್ನು ಸಂಸ್ಕಾರ ಮಾಡಿದೆಯಂತೆ. ಯೂರೋಪ್‌ನಲ್ಲಿ ಮೂರನೇ ಅತಿ ದೊಡ್ಡ ಶವ ಸಂಸ್ಕಾರ ಸಂಸ್ಥೆ ಎಂಬ ಹೆಗ್ಗಳಿಕೆ. ಭಾರತದಲ್ಲಿ ಯಾರಿಗೂ ಇಂತಹ ದುಡ್ಡು ಮಾಡುವ ಐಡಿಯಾ ಸದ್ಯಕ್ಕೆ ಬಂದಿಲ್ಲ.



ರಷ್ಯಾದ ಝಾರ್ ದೊರೆಗಳಿಗೆ ಸೇರಿದ ಈ ಈಸ್ಟರ್ ಮೊಟ್ಟೆ ಅಪ್ಪಟ ಚಿನ್ನದಿಂದ ಮಾಡಿದ್ದು. ಈಗ ಇದರ ಬೆಲೆ 2 ಕೋಟಿ ಡಾಲರ್ (ಸುಮಾರು 120 ಕೋಟಿ ರೂಪಾಯಿ). ಅಮೆರಿಕದ ಹಳೆಯ ಲೋಹಗಳ ವ್ಯಾಪಾರಿಯ ಬಳಿ ಹಲವು ವರ್ಷಗಳಿಂದ ಬಿದ್ದಿದ್ದ ಇದನ್ನು ಪ್ರಾಚೀನ ವಸ್ತುಗಳನ್ನು ಸಂಗ್ರಹಿಸುವವನೊಬ್ಬ ಕೆಲವೇ ಡಾಲರ್‌ಗಳಿಗೆ ಖರೀದಿಸಿದನಂತೆ. ಲೋಹದ ವ್ಯಾಪಾರಿಯ ದುರದೃಷ್ಟ, ಪ್ರಾಚೀನ ವಸ್ತುಗಳ ವ್ಯಾಪಾರಿಯ ಅದೃಷ್ಟ.

